## ದಿನಾಂಕ : 20.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್-113ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-113 ಕೋನೇನ ಅಗ್ರಹಾರ ವಾರ್ಡ್ ಕಛೇರಿಯಲ್ಲಿ ದಿನಾಂಕ : 20-03-2021 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಜಿ.ಹೆಗ್ಡೆ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-113.
2. ಶ್ರೀ.ವಿ.ಸಾಮಂದಯ್ಯ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಎನ್.ಎಂ.ಪ್ರವೀಣ್ – ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹೆಚ್.ಆರ್.ಶ್ರೀಧರ್ – ಎ.ಎಸ್.ಐ ಪೋಲೀಸ್ ಇಲಾಖೆ
5. ಶ್ರೀ.ಮನೋಹರ್.ಜಿ. – ಎಇ ಬೆಸ್ಕಾಂ
6. ಶ್ರೀ.ಮಂಜುನಾಥ್.ಬಿ – ಕೆ.ಪ ಬಿಡಬ್ಲ್ಯೂಎಸ್ಎಸ್‌ಬಿ
7. ಶ್ರೀ.ಜಿ.ಕೆ.ಚಿಕ್ಕಣ್ಣಪ್ಪ – ಕೆ.ಪ, ಬಿಡಬ್ಲ್ಯೂಎಸ್ಎಸ್‌ಬಿ
8. ಶ್ರೀಮತಿ.ಪೂರ್ಣಿಮಾ ಶೆಟ್ಟಿ – ಸದಸ್ಯರು
9. ಶ್ರೀ.ವಿ.ಚಂದ್ರಶೇಖರ್ ರೆಡ್ಡಿ – ಸದಸ್ಯರು
10. ಶ್ರೀ.ಮುರಳಿಮೋಹನ್ – ಸದಸ್ಯರು
11. ಶ್ರೀ.ಎಸ್.ಜೈಕುಮಾರ್ – ಸದಸ್ಯರು
12. ಶ್ರೀಮತಿ.ಉಷಾ ಶಂಕರ್ – ಸದಸ್ಯರು
13. ಶ್ರೀ.ಪಿ.ಎಂ.ಏಕಾಂಬರೇಶ್ ರೆಡ್ಡಿ – ಸದಸ್ಯರು
14. ಶ್ರೀ.ಎನ್.ಎ.ಮುದ್ದಪ್ಪ – ಸದಸ್ಯರು
15. ಹೇಮಂತ್.ವಿ – ಸದಸ್ಯರು
16. ಶ್ರೀ.ಕೆ.ಫಯಾಜ್ ಅಹ್ಮದ್ – ಸದಸ್ಯರು
17. ಶ್ರೀ.ಎಸ್.ಪದ್ಮನಾಭ – ಸದಸ್ಯರು
18. ಶ್ರೀ.ರಾಮಸ್ವಾಮಿ – ಸದಸ್ಯರು
19. ಶ್ರೀ.ಚಂದ್ರಕಾತ್ – ಸದಸ್ಯರು
20. ಶ್ರೀ.ಆರ್.ವಿಜಯ್‌ಕುಮಾರ್ – ಸದಸ್ಯರು
21. ಶ್ರೀ.ಕೆ.ಎಂ.ನಾಗರಾಜ್ – ಸದಸ್ಯರು
22. ಶ್ರೀ.ಮಹಮ್ಮದ್ ಷರೀಫ್ – ಸದಸ್ಯರು
23. ಶ್ರೀ.ಮೂರ್ತಿ ಯಾದವ್ – ಸದಸ್ಯರು
24. ಶ್ರೀ.ಮಧು – ಸದಸ್ಯರು

ಪ್ರಥಮವಾಗಿ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಮಾತನಾಡಿದರು. ನಂತರ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಸಾಮಂದಯ್ಯರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ನಂತರದಲ್ಲಿ ಹಿಂದಿನ ಸಭೆಯ ನಡವಳಿಗಳನ್ನು ಓದಿ

ತಿಳಿಸಲಾಯಿತು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ಮಾನ್ಯ ಅಧ್ಯಕ್ಷರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಇತ್ತೀಚಿನ ದಿನಗಳಲ್ಲಿ ಕೋವಿಡ್-19 ಪ್ರಕರಣಗಳು ಪುನಃ ಹೆಚ್ಚಾಗುತ್ತಿದ್ದು, ಈ ವಿಷಯವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಕೋವಿಡ್ ಬರದಂತೆ ಮುನ್ನೆಚ್ಚರಿಕೆ ವಹಿಸಬೇಕಾದಂತಹ ವಿಷಯಗಳಾದ ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಉಪಯೋಗಿಸುವುದು, ಸಾಮಾಜಿಕ ಅಂತಹ ಕಾಪಾಡಿಕೊಳ್ಳುವುದು ಮುಂತಾದವುಗಳ ಬಗ್ಗೆ ತಮ್ಮ ಪ್ರದೇಶಗಲ್ಲಿ ಅರಿವು ಮೂಡಿಸುವಂತೆ ಸದಸ್ಯರುಗಳಿಗೆ ತಿಳಿಸಲಾಯಿತು.
- ಕೋಡಿಹಳ್ಳಿ ಪ್ರೈಮರಿ ಹೆಲ್ತ್ ಸೆಂಟರ್‌ಗೆ ಕೋವಿಡ್ ಟೆಸ್ಟ್‌ಗಾಗಿ ಹಾಗೂ ಕೋವಿಡ್ ಚುಚ್ಚುಮದ್ದು ಹಾಕಿಸಿಕೊಳ್ಳಲು ಬರುವ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಸಮರ್ಪಕವಾದ ವ್ಯವಸ್ಥೆ ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಪ್ರೈಮರಿ ಹೆಲ್ತ್ ಸೆಂಟರ್‌ನ ಎದುರುಗಡೆ ಶಾಮಿಯಾನ ಅಳವಡಿಸಿ ಸಾರ್ವಜನಿಕರು ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ವ್ಯವಸ್ಥೆ ಮಾಡಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.
- ಶ್ರೀ.ಚಂದ್ರಶೇಖರ್ ರೆಡ್ಡಿ ಮತ್ತು ಶ್ರೀ.ಜೈಕುಮಾರ್ ಸದಸ್ಯರುಗಳು ಮಾತನಾಡಿ, ರಾಜ್‌ಕುಮಾರ್ ಪಾರ್ಕಿನಲ್ಲಿ ವಾರ್ಡಿನ ಬಡಾವಣೆಗಳ ನಿವಾಸಿಗಳನ್ನು ಹೊರತುಪಡಿಸಿ ಹೊರಗಿನಿಂದ ಕೆಲವರು ಬಂದು ಪಾರ್ಕಿನ ಒಳಗಡೆ ವ್ಹೀಲಿಂಗ್ ಮಾಡುವುದು, ಬೇಜವಾಬ್ದಾರಿ ವರ್ತನೆ ತೋರಿಸುವಂತಹ ಕೆಲಸಗಳನ್ನು ಮಾಡುತ್ತಿರುತ್ತಾರೆ. ಆದುದರಿಂದ ಇದನ್ನು ತಡೆಗಟ್ಟಲು ಸಮರ್ಪಕವಾದ ಭದ್ರತಾ ಸಿಬ್ಬಂಧಿ ಇಲ್ಲವೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ತೋಟಾಗಿರಿಕಾ ಇಲಾಖೆಯ ಅಧಿಕಾರಿಗಳ ಪರವಾಗಿ ಸಭೆಗೆ ಆಗಮಿಸಿದ್ದ ಶ್ರೀಕಾಂತ್ ನಿರ್ವಹಣಾ ಗುತ್ತಿಗೆದಾರರು ಮಾತನಾಡಿ, ಒಂದು ತಿಂಗಳ ಕಾಲ ಸದಸ್ಯರು ಸೂಚಿಸುವ ಭದ್ರತಾ ಸಿಬ್ಬಂಧಿಯನ್ನು ಸದರಿ ಪಾರ್ಕಿನಲ್ಲಿ ನಿಯೋಜಿಸಲು ಮತ್ತು ಅವರ ಸಂಬಳವನ್ನು ಪಾವತಿಸಲು ಒಪ್ಪಿರುತ್ತಾರೆ. ಮತ್ತು ಪಾರ್ಕಿನ ಸಮಯವನ್ನು ಸಂಜೆ 4.00 ರಿಂದ 8.00 ಗಂಟೆಗೆ ಸೀಮಿತಗೊಳಿಸಲು ಒಪ್ಪಕೊಳ್ಳುತ್ತಾರೆ.
- ಮುಂದುವರೆದು, ರಾಜ್‌ಕುಮಾರ್ ಪಾರ್ಕ್ ಬಿಡಿಎ ಬಡಾವಣೆಯಲ್ಲಿ ಅನಧೀಕೃತವಾಗಿ ವಾಣಿಜ್ಯ ಉದ್ಧೇಶದಿಂದ ರಿಯಾಲಿಟಿ ಶೋ ಗೆ ಡಾನ್ಸ್ ಪ್ರಾಕ್ಟೀಸ್ ಮಾಡಿಸುತ್ತಿರುವ ಶ್ರೀ.ಪ್ರವೀಣ್ ಎಂಬುವವರ ಚಟುವಟಿಕೆಯನ್ನು ಕೂಡಲೇ ಸ್ಥಗಿತಗೊಳಿಸಲು ಹಾಗೂ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.
- ಕೋಡಿಹಳ್ಳಿ ಮಣಿಪಾಲ್ ಜಂಕ್ಷನ್ ಹತ್ತಿರ, ಏರ್‌ಪೋರ್ಟ್ ರಸ್ತೆಯಲ್ಲಿ ಯು ಟರ್ನ್ ಓಪನಿಂಗ್ ಬಗ್ಗೆ ಶ್ರೀಯಾದವ್‌ರವರು ಮಾತನಾಡಿದಾಗ, ಈ ವಿಷಯವಾಗಿ ಡಿಸಿಪಿ ಟ್ರಾಫಿಕ್ ಹಲಸೂರು ಇಲ್ಲಿಗೆ ಕೋಡಿಹಳ್ಳಿ ಮತ್ತು ರುಸ್ತುಂ ಬಾಗ್ ಪರಿಸರದ ಸದಸ್ಯರುಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ಸಮಸ್ಯೆಯನ್ನು ಬಗೆಹರಿಸಲು ತೀರ್ಮಾನಿಸಲಾಯಿತು.
- ಇಡೀ ವಾರ್ಡಿನಲ್ಲಿ ನೀರು ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂದು ಸದಸ್ಯರುಗಳು ಒಕ್ಕೊರಲಿನಿಂದ ಸಭೆಯಲ್ಲಿ ತಿಳಿಸಿದರು. ಶ್ರೀ.ಜೈಕುಮಾರ್‌ರವರು ಮಾತನಾಡಿ, ಬಿಡಬ್ಲ್ಯೂಎಸ್‌ಎಸ್‌ಬಿರವರಿಗೆ ಪತ್ರ ಬರೆದು ಅವರಿಂದ ಸಭೆಯನ್ನು ನಿಗಧಿಪಡಿಸಿ, ಸಮರ್ಪಕವಾಗಿ ನೀರು ಸರಬರಾಜು ಮಾಡುವ ಬಗ್ಗೆ ಚರ್ಚಿಸಲು ಸಭೆಗೆ ತಿಳಿಸಿದರು.
- ಶ್ರೀ.ಯಾದವ್‌ರವರು ಮಾತನಾಡಿ, ಕೋಡಿಹಳ್ಳಿಯಲ್ಲಿ ಬೋರ್‌ವೆಲ್ ಕೆಟ್ಟುಹೋಗಿದ್ದು, ಇದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
- ವಾರ್ಡಿನ ಕಛೇರಿಯಲ್ಲಿ ವಾರ್ಡಿಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಅಂದರೆ ಆಸ್ತಿ ವಿವರಗಳ ರಿಜಿಸ್ಟರ್, ಕೊಳವೆಬಾವಿಗಳ ರಿಜಿಸ್ಟರ್ ಇತ್ಯಾದಿಗಳನ್ನು ಹಿಂದಿನ ಅಭಿಯಂತರರು

ಹಾಲಿ ಅಭಿಯಂತರರವರಿಗೆ ಹಸ್ತಾಂತರಿಸಿರುವುದಿಲ್ಲ ಎಂಬ ಮಾಹಿತಿಗೆ ಮುಂದಿನ ಸಭೆಗೆ ಹಿಂದಿನ ಸಹಾಯಕ ಇಂಜಿನಿಯರ್‌ರವರನ್ನು ಹಾಜರಾಗುವಂತೆ ನಿರ್ದೇಶಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

- ಅಧ್ಯಕ್ಷರು ಮಾತನಾಡಿ ಒಂದು ತಿಂಗಳಿನಲ್ಲಿ 2 ಮೀಟಿಂಗ್‌ಗಳಿದ್ದು, ಇದರ ಪೈಕಿ ಒಂದು ಮೀಟಿಂಗ್ ಅನ್ನು 'ವಾಕ್ ಇನ್ ದಿ ವಾರ್ಡ್' ನಡೆಸಿ ಸಭೆಯನ್ನು ನಡೆಸುವುದು ಎಂದು ಸಭೆಗೆ ತಿಳಿಸಿದ್ದಕ್ಕೆ ಸರ್ವಾನುಮತದಿಂದ ಎಲ್ಲಾ ಸದಸ್ಯರುಗಳು ಒಪ್ಪಿಗೆ ಸೂಚಿಸಿದ್ದಾರೆ.
- ಶ್ರೀ.ಚಂದ್ರಶೇಖರ್ ರೆಡ್ಡಿರವರು ಮಾತನಾಡಿ, ವಾರ್ಡಿನ ಎಲ್ಲಾ ಕಡೆ ಮ್ಯಾನ್‌ಹೋಲ್‌ಗಳು ರಸ್ತೆಯಿಂದ ಕೆಳಮಟ್ಟದಲ್ಲಿದ್ದು, ಇದನ್ನು ರಸ್ತೆಯ ಸಮಕ್ಕೆ ಸರಿಪಡಿಸಲು ಸಭೆಗೆ ತಿಳಿಸಿದರು. ಇದಕ್ಕೆ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಮಾತನಾಡಿ ಈಗಾಗಲೇ ಹಲವು ಕಡೆ ಮ್ಯಾನಹೋಲ್‌ಗಳನ್ನು ಸರಿಪಡಿಸುತ್ತಿದ್ದು, ಇದನ್ನು ದಿನಕ್ರಮೇಣವಾಗಿ ಎಲ್ಲಾ ಕಡೆಗಳಲ್ಲಿಯೂ ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದರು.
- ಅಧ್ಯಕ್ಷರು ಮಾತನಾಡಿ, ಸಾರ್ವಜನಿಕರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಹೋಗಬೇಕಾಗಿರುವ ಕಾರಣ ಆ ಸಮಯದಲ್ಲಿ ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ದೈನಂದಿನ ಕೆಲಸಗಳಿಗೆ ತೊಂದರೆಯುಂಟಾಗುವುದರಿಂದ ಬೆಳಗ್ಗಿನ ವೇಳೆಯಲ್ಲಿ ವಿದ್ಯುತ್‌ಚ್ಛಕ್ತಿ ವ್ಯತ್ಯಯವನ್ನು ಮಾಡದಿರಲು ಬೆಸ್ಕಾಂ ಇಲಾಖೆರವರಿಗೆ ಸೂಚಿಸಿದರು.
- ಕೋವಿಡ್–19 ನಿರ್ವಹಣೆಗಾಗಿ ಪಾಲಿಕೆಯ ವತಿಯಿಂದ ವಾರ್ಡ್‌ಗೆ ಮೀಸಲಿರಿಸಿದ್ದ ರೂ.20.00 ಲಕ್ಷಗಳ ಅನುದಾನದ ಬಗ್ಗೆ ಚರ್ಚಿಸಿದಾಗ, ಶ್ರೀ.ಕೆ.ಫಯಾಜ್, ಗುತ್ತಿಗೆದಾರರು, ಸದರಿ ಕೆಲಸದ ಗುತ್ತಿಗೆಯನ್ನು ಪಡೆದುಕೊಂಡಿದ್ದು, ಸರಬರಾಜು ಆದೇಶ ಸಂಖ್ಯೆ : ಕಾಪಾಅ/ಸಿವಿರಾ/ಕ್ಯೂಡಬ್ಲ್ಯೂಸಿ/58/2021 ದಿನಾಂಕ :08-09-2021 ರಲ್ಲಿ ಪಡೆದು ಈಗಾಗಲೇ ಸೆಪ್ಟಂಬರ್–2020 ರ ಮಾಹೆಯಲ್ಲಿ ಸರಬರಾಜು ಆದೇಶದಲ್ಲಿ ಸರಬರಾಜು ಮಾಡಲು ತಿಳಿಸಿದ್ದ ಬಹುತೇಕ ಸಾಮಗ್ರಿಗಳನ್ನು ಸರಬರಾಜು ಮಾಡಿರುತ್ತಾರೆ. ಹಾಗೂ ಬಾಕಿ ಉಳಿದಿರುವ 300 ಆಹಾರ ಕಿಟ್‌ಗಳನ್ನು ಮಾರ್ಚ್–2021 ರ ಒಳಗಾಗಿ ವಾರ್ಡ್ ಕಛೇರಿಗೆ ಸರಬರಾಜನ್ನು ಪಡೆದು, ಸಮಿತಿಯ ಸದಸ್ಯರ ಮುಖಾಂತರ ಸಾರ್ವಜನಿಕರಿಗೆ ಹಂಚಿಕೆ ಮಾಡುವಂತೆ ತದನಂತರ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲು ಕ್ರಮವಹಿಸಲು ಸಭೆಯಲ್ಲಿ ಒಮ್ಮತದಿಂದ ನಿರ್ಣಯ ತೆಗೆದುಕೊಳ್ಳಲಾಯಿತು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ–113**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 113**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 113**